ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳು

೮೦೫ (೧೫೭೩) ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಈವರೆಗೆ ರಾಜ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಲ್ಪಟ್ಟಿರುವವರ ಸಂಖ್ಯೆ ಎಷ್ಟು ?

ಆ) ೧೯೮೪-೮೮, ೧೯೮೮–೯೦ನೇ ಸಾಲಿನಲ್ಲಿ ೩ನೇ ವರ್ಗದಿಂದ ೪ನೇ ದರ್ಜೆಯ ನೌಕರಿಗಳು ಎಷ್ಟು ಜನರಿಗೆ ದೊರೆಕಿದೆ ?

ಇ) ಆ ಪೈಕಿ ಹಿಂದುಳಿದ ವರ್ಗದ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಎಷ್ಟು ನೌಕರಿ ದೊರಕಿವೆ ?

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ೧೯೯೦ನೇ ಏಪ್ರಿಲ್ ಮಾಹೆಯ ಅಂತ್ಯಕ್ಕೆ

ಪುರುಷರು	—	೧೦,೧೫-೫೦೩
ಮಹಿಳೆಯರು	—	೨,೩೧,೨೨೪
ಒಟ್ಟು		೧೨,೪೬,೭೨೭

ಇ) ವರ್ಷ — ಉದ್ಯೋಗ ಪಡೆದ ಅಭ್ಯರ್ಥಿಗಳ ಸಂಖ್ಯೆ

೧೯೮೮–೮೯	೯,೦೫೪
೧೯೮೯–೯೦	೧೦,೨೩೪

ವರ್ಷ	ಪ. ಜಾ.	ಪ. ವರ್ಗ	ಹಿ. ವರ್ಗ
೧೯೮೮	೧೭೫೮	೪೦೬	೧೭೪೮
೧೯೮೯	೧೮೩೫	೪೯೨	೨೦೬೨

ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ತಾಲ್ಲೂಕು ಬರಗಾಲಕ್ಕೆ ತುತ್ತಾಗಿರುವ ಬಗ್ಗೆ

೮೦೬ (೧೬೪೨) ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ ಹಾಗೂ ಇತರ ತಾಲ್ಲೂಕುಗಳು ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಸರ್ಕಾರದವರು ಕೈಗೊಂಡ ಪರಿಹಾರ ಕ್ರಮಗಳೇನು ?

ಶ್ರೀ ಕೆ.ಎಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಹೌದು

ಆ) ಪ್ರಚಲಿತ ಕಾರ್ಯಕ್ರಮಗಳಲ್ಲದೇ ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಲಾಗುತ್ತಿದೆ. ಅಲ್ಲದೆ, ಜಿಲ್ಲೆಯ ಅಭಾವ ಪೀಡಿತ ಗ್ರಾಮಾಣ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಚಿತ್ರದುರ್ಗ ಜಿಲ್ಲಾಪರಿಷತ್ತಿಗೆ ೧೫–೦೦ ಲಕ್ಷ ರೂ. ಗಳನ್ನು ೧೯೯೦–೯೧ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.